# ಯುದ್ಧಭೂಮಿಯಲ್ಲಿ ಅರಳಿದ ಸಾಧಕ

■ ಪ್ರವೀಣ ಕುಲಕರ್ಣಿ



ಇರಾಕ್ ನೆಲದೊಳಗೆ ಹೋಗಿ ಅಮೆರಿಕ ಯುದ್ಧ ಸಾರಿದ ಘಟನೆಗೆ ಈಗ ಎರಡು ದಶಕಗಳೇ ಸಂದಿವೆ. ತೈಲದ ಆಗರವಾದ ಈ ದೇಶದ ಅಧ್ಯಕ್ಷರಾಗಿದ್ದ ಸದ್ದಾಂ ಹುಸೇನ್ ಚರಿತ್ರೆ ಪುಟ ಸೇರಿಯೂ ಆಗಿದೆ. ಈ ಯುದ್ಧದ ಕುಲುಮೆಯಲ್ಲಿ ಸುಟ್ಟು ಕರಕಲಾದ ಇರಾಕ್‌ನ ಕುಟುಂಬಗಳೆಷ್ಟೋ. ಬುಲೆಟ್‌ಗಳು, ಬಾಂಬ್‌ಗಳು ಮತ್ತು ಅವುಗಳಿಂದ ಹರಿದ ರಕ್ತದ ಹೊಳೆಯನ್ನು ನೋಡುತ್ತಾ ಬೆಳೆದವರಲ್ಲಿ ಅಲನ್ ಝುಂಗಾನಾ ಎಂಬ ಹುಡುಗನೂ ಒಬ್ಬ.

ಇಸ್ಲಾಮಿಕ್ ಸ್ಟೇಟ್‌ನ ಅಬ್ಬರದ ಕರಾಳ ದಿನಗಳ ನೆನಪು ಅಲನ್ ಕಣ್ಣಲ್ಲಿ ಇನ್ನೂ ಪ್ರತಿಬಿಂಬಿಸುತ್ತಿದೆ. 'ಆಗಿನ ಘಟನೆಗಳನ್ನು ನೆನಪಿಸಿಕೊಳ್ಳುವಲ್ಲಿ ಏನೂ ಸುಖವಿಲ್ಲ ಬಿಡಿ' ಎಂದೆನ್ನುವ ಅವರು, 'ಭವಿಷ್ಯ ಕೂಡ ಆಶಾದಾಯಕವಿಲ್ಲ. ಆದರೆ, ಪುಟ್ಟ ಮತ್ತು ದಿಟ್ಟ ಹೆಜ್ಜೆಗಳನ್ನು ನಾವು ಇಡಲೇಬೇಕಿದೆ' ಎಂದು ಹೇಳುತ್ತಾರೆ. ಅಮೆರಿಕವು ಇರಾಕ್‌ನಲ್ಲಿ ಯುದ್ಧ ಸಾರಿದಾಗ ಅಲನ್‌ಗೆ ಹನ್ನೆರಡು ವರ್ಷ. ಆತನೇನೂ ಯುದ್ಧ ಹೀರೊ ಕೂಡ ಅಲ್ಲ. ಹಾಗಿದ್ದಮೇಲೆ ಈಗೇಕೆ ಅವರ ಪ್ರಸ್ತಾವ ಎನ್ನುವ ಪ್ರಶ್ನೆಯೇ?

ಯುದ್ಧದಿಂದ ನಲುಗಿದ ಇರಾಕ್‌ನಲ್ಲಿ ಸ್ವತಂತ್ರವಾಗಿ ಬದುಕು ಕಟ್ಟಿಕೊಳ್ಳುವ, ಜಗತ್ತಿನ ಬದಲಾವಣೆಗೆ ತಕ್ಕಂತೆ ಹೆಜ್ಜೆ ಹಾಕುವ ಪ್ರವೃತ್ತಿ ಯುವಕರಲ್ಲಿ ಹೆಚ್ಚುತ್ತಿದೆ. ಅಲನ್ ಕೂಡ ಅಂತಹ ಬದುಕಿಗಾಗಿ ಹಾತೊರೆಯುತ್ತಿರುವ ಹುಡುಗ. ತನ್ನದೇ ಪಾಡ್‌ಕಾಸ್ಟ್ ಸಂಸ್ಥೆಯನ್ನು ಸ್ಥಾಪಿಸಿರುವ ಈತನೀಗ ಕೊಲ್ಲಿ ದೇಶದ ಒಬ್ಬ ಜನಪ್ರಿಯ ಕಥೆಗಾರ. ಯುದ್ಧದ ಕಥೆಗಳನ್ನೂ ಆತ ಹೇಳುತ್ತಾನೆ. ಅದಕ್ಕಾಗಿ ಬುಲೆಟ್‌ಗಳ ವಿನಿಮಯಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದ್ದವರನ್ನು ಪ್ರೀತಿಯಿಂದ ಮಾತನಾಡಿಸುತ್ತಾನೆ.

ಬಾಗ್ದಾದ್‌ಗೆ ಅಮೆರಿಕದ ಸೈನ್ಯ ನುಗ್ಗಿ ಭೀಕರ ಗುಂಡಿನ ವಿನಿಮಯ ಆಗುವಾಗ ಸ್ನಾನದ ಕೋಣೆಗಳಲ್ಲಿ ಜನ ಅಡಗಿ ಕುಳಿತಿರಬೇಕಾಗಿದ್ದ ಕಥೆ, ಮನೆಯ ಬಾಗಿಲು ಹಾಕಿಕೊಂಡು ಸುರಕ್ಷಿತವಾಗಿದ್ದೇವೆ ಎಂದು ಸಂಭ್ರಮಿಸುವಷ್ಟರಲ್ಲಿ ಮನೆಯೇ ಕುಸಿದುಬಿದ್ದ ಕಥೆ, ಕಡು ಬೇಸಿಗೆಯಲ್ಲಿ ಸೆಕೆ ತಾಳಲಾರದೆ ಮಾಳಿಗೆ ಮೇಲೆ ಮಲಗಿದವರ ಪಕ್ಕದಲ್ಲೇ ಬಾಂಬ್ ಬಿದ್ದು ಸ್ಫೋಟಗೊಂಡ ಕಥೆ, ಮನೆಗೆ ಹೊರಟ ರಸ್ತೆಯೇ ಇದ್ದಕ್ಕಿದ್ದಂತೆ ರಣಾಂಗಣವಾದ ಕಥೆ... ಹೀಗೆ ಅಲನ್ ಅವರ ಪಾಡ್‌ಕಾಸ್ಟ್ ಒಂದು ಕಥಾಕಣಜವೇ ಆಗಿದೆ.

'ನಮ್ಮ ದೇಶವನ್ನು ನಿರಂತರವಾಗಿ ಕಾಡಿದ ಯುದ್ಧ ನಿರುದ್ಯೋಗ ಸಮಸ್ಯೆಯನ್ನು ಬೃಹದಾಕಾರವಾಗಿ ಬೆಳೆಸಿದೆ. ಎಷ್ಟೋ ಯುವಕರು ಕ್ರೂರ ಯುದ್ಧದಲ್ಲಿ ಜೀವವನ್ನೇ ಕಳೆದುಕೊಂಡಿದ್ದಾರೆ. ದೇಶವನ್ನು ಮತ್ತೆ ಸದೃಢವಾಗಿ ಕಟ್ಟಬೇಕಿದೆ. ಉದ್ಯೋಗಗಳು ಸೃಷ್ಟಿಯಾಗಬೇಕಿದೆ. ಆದರೆ, ಈ ಹಾದಿ ಸುಲಭವಿಲ್ಲ' ಎಂದು ಅಲನ್ ಹೇಳುತ್ತಾರೆ.

ಅಮೆರಿಕದ ಸೈನ್ಯ ಬಾಗ್ದಾದ್ ಪ್ರವೇಶಿಸಿದ ಘಟನೆಯನ್ನು ಅಲನ್, ತನ್ನ ತಂದೆ–ತಾಯಿಯ ಜತೆ ಟಿ.ವಿ.ಯಲ್ಲಿ ನೋಡಿದ್ದನಂತೆ. 'ಏನೇನು ಅವಘಡ ನಡೆಯಲಿದೆಯೋ ಎಂದು ಬೆಳಗಿನವರೆಗೆ ಜೀವ ಕೈಯಲ್ಲಿ ಹಿಡಿದುಕೊಂಡು ಮನೆಯೊಳಗೆ ಕುಳಿತಿದ್ದೆವು. ಕೆಲವು ವಾರಗಳ ನಂತರ ಸದ್ದಾಂ ಅವರ ಬೃಹತ್ ಪ್ರತಿಮೆಯನ್ನು ಅಮೆರಿಕ ಸೈನಿಕರು ನೆಲಕ್ಕೆ ಉರುಳಿಸಿದರು. ಆ ಪ್ರತಿಮೆ ಉರುಳಿಸುವುದನ್ನು ಜಗತ್ತಿಗೆ ತೋರಿಸಲು ರೋಲಿಂಗ್ ಕ್ಯಾಮೆರಾಗಳನ್ನು ತಂದಿದ್ದರು...' ಈ ಹುಡುಗ ಹೀಗೆ ಕಥೆ ಹೇಳುತ್ತಾ ಕುಳಿತರೆ ಎದುರಿಗೆ ಕುಳಿತವರು ತದೇಕಚಿತ್ತರಾಗಿ ಕೇಳಬೇಕು.

ಕುರ್ದಿಷ್ ಯುವಕನಾದ ಅಲನ್ ಅರೆಬಿಕ್ ಭಾಷೆಯನ್ನೂ ಬಲ್ಲ. ಚರಿತ್ರೆಯಲ್ಲದೆ, ಪ್ರಚಲಿತ ವಿದ್ಯಮಾನದ ಕುರಿತೂ ಆತನ ಪಾಡ್‌ಕಾಸ್ಟ್ ವಿಶೇಷ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತದೆ. ವಾಕ್ ಸ್ವಾತಂತ್ರ್ಯದ ಹಂಬಲ ಈ ಪಾಡ್‌ಕಾಸ್ಟ್‌ನ ಪ್ರತಿಯೊಂದು ಕಾರ್ಯಕ್ರಮದಲ್ಲೂ ಎದ್ದು ಕಾಣುತ್ತದೆ. 'ಇರಾಕ್ ಜನ ಕಳೆದ 20 ವರ್ಷಗಳಲ್ಲಿ ಕಹಿ ನೆನಪುಗಳ ಮೂಟೆಯನ್ನೇ ಹೊತ್ತು ನಡೆದಿದ್ದಾರೆ. ಮನದಾಳದಲ್ಲಿ ಆದ ಗಾಯಗಳು ಇನ್ನೂ ವಾಸಿಯಾಗಿಲ್ಲ. ಹೀಗಾಗಿ ಹೊರಜಗತ್ತಿಗೆ ಅವರು ತೆರೆದುಕೊಳ್ಳುವುದೇ ಅಪರೂಪ' ಎಂದು ಅಲನ್ ವಿವರಿಸುತ್ತಾರೆ.

ಅಲನ್‌ನ ಪಾಡ್‌ಕಾಸ್ಟ್‌ಗೆ ಮಾತನಾಡಲು ಬರುವವರು ರಾಜಕೀಯದ ಕುರಿತು ಮಾತನಾಡುತ್ತಾರೆ. ಶ್ರೀಮಂತ ಪ್ರಾಚೀನ ಸಂಸ್ಕೃತಿಯ ಕುರಿತು ಚರ್ಚಿಸುತ್ತಾರೆ. ಸರ್ಕಾರದ ಆರ್ಥಿಕ ನೀತಿಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಆದರೆ, ಈ ಅಭಿಪ್ರಾಯಗಳು ಎಚ್ಚರಿಕೆಯಿಂದ ಕೂಡಿರುತ್ತವೆ. ಯಾವುದೇ ಅಪಾಯವನ್ನು ಮೈಮೇಲೆ ಎಳೆದುಕೊಳ್ಳಲು ಅವರು ಸಿದ್ಧರಿಲ್ಲ.

'ನಮ್ಮ ಪಾಡ್‌ಕಾಸ್ಟ್‌ನಲ್ಲೂ ಎಷ್ಟೋ ವಿಷಯಗಳನ್ನು ಮುಕ್ತವಾಗಿ ಚರ್ಚಿಸಲು ಸಾಧ್ಯವಿಲ್ಲ. ದೇಶದಲ್ಲಿ ಇಂತಹ ವಾತಾವರಣ ಇರುವುದು ಒಳ್ಳೆಯ ಲಕ್ಷಣವಲ್ಲ' ಎಂದು ಅಲನ್ ಹೇಳುತ್ತಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65